




# ಮೈಸೂರು ಜಾಂಬೂರಿ ಬಿತ್ತಿದ ಕನಸು

**ರಾಜ್ಯದ ಸ್ಕೌಟ್ಸ್ ಚಳವಳಿ ಆರಂಭ ಆದದ್ದೇ ಮೈಸೂರಿನಲ್ಲಿ. ೧೯೧೭ರಲ್ಲಿ ಸ್ಕೌಟಿಂಗ್ ಚಳುವಳಿಯು ಗಂಡು ಮಕ್ಕಳಿಗಾಗಿ ಅಧಿಕೃತವಾಗಿ ಆರಂಭವಾಗಿತ್ತು. ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಇದಕ್ಕೆ ಪೋಷಕರಾಗಿದ್ದರು.**

★ **ಆರ್.ಜಿ.ಹಳ್ಳಿ ನಾಗರಾಜ್**

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಇತ್ತೀಚೆಗೆ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ 17ನೇ ರಾಷ್ಟ್ರೀಯ ಜಾಂಬೂರಿಯನ್ನು ಯಶಸ್ವಿಯಾಗಿ ನಡೆಸಿ, ದೇಶ ವಿದೇಶಗಳ ಮಕ್ಕಳು ಹಾಗೂ ಯುವಜನಾಂಗದಲ್ಲಿ ಶಾಂತಿ–ಶಿಸ್ತಿನ ಕನಸನ್ನು ಬಿತ್ತಿ ಹೋಗಿದೆ.

ಜಾಂಬೂರಿ ಎಂಬ ಮಹಾಮೇಳದ ಆತಿಥ್ಯ ಕರ್ನಾಟಕಕ್ಕೆ ಒಲಿದು ಬಂದಿದ್ದು ಮೂರನೇ ಬಾರಿ. ಈ ಮೊದಲು 1960ರಲ್ಲಿ ಈಗಿನ ಬೆಂಗಳೂರಿನ ಸದಾಶಿವನಗರ ಬಡಾವಣೆ ಪ್ರದೇಶದಲ್ಲಿ ನಡೆದಿತ್ತು. ವಿಶ್ವಮಟ್ಟದಲ್ಲಿ ಸ್ಕೌಟ್ಸ್‌ಅನ್ನು ಎತ್ತರಕ್ಕೆ ಕೊಂಡೊಯ್ದ ಲಾರ್ಡ್ ಬೇಡನ್ ಪೊವೆಲ್ಲರ ಪತ್ನಿ ಅಲೇವ್ ಲೇಡಿ ಬೇಡೆನ್ ಪೊವೆಲ್ ಅವರು ಆಗ  ಭಾಗವಹಿಸಿದ್ದರು. 1986ರಲ್ಲಿ ಅರಮನೆ ಮೈದಾನದಲ್ಲಿ ಎರಡನೇ ಬಾರಿಗೆ ಜಾಂಬೂರಿ ನಡೆದಾಗ ಪ್ರಧಾನಮಂತ್ರಿ ರಾಜೀವ ಗಾಂಧಿ ಭಾಗವಹಿಸಿದ್ದರು. ಮೂರನೇ ಬಾರಿಯ ಮೈಸೂರು ಜಾಂಬೂರಿಗೆ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಬಂದು ಹೋಗಿದ್ದು ವಿಶೇಷ.

ಮೈಸೂರಿನಿಂದ ಇಪ್ಪತ್ತು ಕಿ.ಮೀ. ದೂರದಲ್ಲಿನ ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಈ ಜಾಂಬೂರಿಗಾಗಿ ನಿರ್ಮಾಣಗೊಂಡಿದ್ದ ನಗರದಲ್ಲಿ ದೇಶದ ವಿವಿಧ ಭಾಗಗಳಿಂದ ಬಂದ ಯುವಜನಾಂಗ ಭಾವೈಕ್ಯತೆಯ ಬೀಜವನ್ನು ಬಿತ್ತಿ ಹೋಗಿದೆ. ಮುಂದೆ ಇದೇ ಜಾಗದಲ್ಲಿ ಸರ್ಕಾರದಿಂದ ಭವಿಷ್ಯದ ಫಿಲಂ ಸಿಟಿ ನಿರ್ಮಾಣವಾಗಲಿದೆ.

ನಾಲ್ಕುನೂರು ಎಕರೆಯಷ್ಟು ವಿಶಾಲ ಹಾಗೂ ಸಮತಟ್ಟಾದ ಪ್ರದೇಶದಲ್ಲಿ ಒಂದು ವಾರಗಳ ಕಾಲ 'ವಿವಿಧತೆಯಲ್ಲಿ ಏಕತೆ' ಎಂಬ ಸಂದೇಶ ಸಾರಿದ ಮಧುರ ನೆನಪುಗಳು ಅವು. ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾದ ಜಾಂಬೂರಿ ಪ್ರದೇಶದ ಸನಿಹದಲ್ಲೇ ಬೆಟ್ಟಗುಡ್ಡಗಳ ಹಾಸು. ಎತ್ತ ಕಣ್ಣು ಹಾಯಿಸಿದರೂ ಭಾರತದ ವೈವಿಧ್ಯಮಯ ಸಂಸ್ಕೃತಿ ಅನಾವರಣಗೊಂಡ ಲೋಕ. ದೇಶದ ಹಲವು ರಾಜ್ಯಗಳ ಇತಿಹಾಸ, ಸಾಂಸ್ಕೃತಿಕ ಅಭಿವ್ಯಕ್ತಿ, ಜಾನಪದೀಯ ಪ್ರತಿನಿಧಿಕ ಬಿಂಬದ ಸ್ತಬ್ಧ ಚಿತ್ರಗಳ ಪ್ರತಿರೂಪದ ದ್ವಾರಗಳು, ಪುಟ್ಟ ಭಾರತವನ್ನೇ ಪ್ರತಿನಿಧಿಸುವಂತಹ ಸುಂದರ ವಾತಾವರಣ. ನಿಯಾನ್ ದೀಪದ ಬೆಳಕಲ್ಲಿ ರಾತ್ರಿ ಕಂಗೊಳಿಸಿದ ಇಂದ್ರನ ರಾಜಧಾನಿಯ ಪರಿಕಲ್ಪನೆ ಉದ್ದೀಪನಗೊಂಡಿತ್ತು.

ಮೂವತ್ತು ಸಾವಿರಕ್ಕೂ ಹೆಚ್ಚು ಏಕರೂಪ ಸಮವಸ್ತ್ರಗಳನ್ನು ತೊಟ್ಟ ಮಕ್ಕಳ ಕಲರವ. ಕಿ.ಮೀ.ಗಟ್ಟಲೆ ಉದ್ದದ ಸುಂದರ ಟಾರ್ ರಸ್ತೆಯ ಇಕ್ಕೆಲಗಳಲ್ಲೂ ರಾಜ್ಯ– ರಾಷ್ಟ್ರ ಪ್ರತಿನಿಧಿಸುವ ವಸ್ತು ಪ್ರದರ್ಶನ, ರಾತ್ರಿ ತಂಗುವ ಸುಸಜ್ಜಿತ ಡೇರೆಗಳು, ಅದರಲ್ಲಿ ವಾಸವಿದ್ದ  ವಿದ್ಯಾರ್ಥಿ ಯುವಜನರೇ  ಸ್ವತಃ ತಯಾರಿಸಿದ ಅಡುಗೆಯ ಘಮ್ಮನೆ ಸುವಾಸನೆ, ಶಿಸ್ತುಬದ್ಧ ಸಿಪಾಯಿಗಳ ನೆನಪಿಸುವ ಉತ್ಸಾಹಿ ಯುವಪಡೆ. ಅಲ್ಲಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ವಿಶಾಲ ಸಭಾಂಗಣ. ಆಯಾ ರಾಜ್ಯಗಳ ಸಂಸ್ಕೃತಿಯ ಪ್ರತೀಕವಾದ ಜಾನಪದ ಮತ್ತಿತರ ಕಲಾ ಪ್ರಾಕಾರಗಳ ಪ್ರದರ್ಶನ. ಹಿರಿಯ ಹಾಗೂ ಸಾರ್ಥಕ ಅನುಭವಿಗಳಿಂದ ಬದುಕಿನ ಮಾರ್ಗದರ್ಶನದ ಉಪನ್ಯಾಸಗಳು ನಡೆದವು. ಹತ್ತಾರು ಎಕರೆ ವಿಸ್ತೀರ್ಣದ ತಾತ್ಕಾಲಿಕ ಕ್ರೀಡಾಂಗಣದಲ್ಲಿ ನಡೆದ ಪೊಲೀಸ್ ಹಾಗೂ ಸೈನಿಕರ ಚಿತ್ತಾಕರ್ಷಕ ರೋಮಾಂಚಕಾರಿ ಕವಾಯಿತು, ಸಾಹಸ ಕ್ರೀಡಾ

